(50)

**ಅತೀ ಮುಖ್ಯವಾದದ್ದು**

# ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ಎಡಿಎಂ.2[2]ರಾಷ್ಟ್ರೀಯ ಏಕತಾ ದಿನಾಚರಣೆ:01:2014-15 ದಿನಾಂಕ:5ನೇ ಅಕ್ಟೋಬರ್ 2014

**: ಸು ತ್ತೋ ಲೆ :**

**ವಿಷಯ**: ದಿನಾಂಕ:31.10.2014ರಂದು ಸರದಾರ್ ವಲ್ಲಭಭಾಯಿ ಪಟೇಲ್ ಇವರ ಜನ್ಮ ದಿನಾಚರಣೆ ಸ್ಮರಣಾರ್ಥ ರಾಷ್ಟ್ರೀಯ "ಏಕತಾ ದಿನಾಚರಣೆ" ಆಚರಿಸುವ ಬಗ್ಗೆ.

**ಉಲ್ಲೇಖ**: ಕಾರ್ಯದರ್ಶಿಗಳು, ಮಾನವ ಸಂಪನ್ಮೂಲ ಇಲಾಖೆ, ನವದೆಹಲಿ, ಇವರ ಪತ್ರ ದಿನಾಂಕ:22.10.2014.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖದಲ್ಲಿನ ಪತ್ರದಲ್ಲಿ ದಿನಾಂಕ:31.10.2014ರಂದು ಸರದಾರ್ ವಲ್ಲಭಭಾಯಿ ಪಟೇಲ್ ಇವರ ಜನ್ಮ ದಿನಾಚರಣೆ ಸ್ಮರಣಾರ್ಥ ರಾಷ್ಟ್ರೀಯ "ಏಕತಾ ದಿನಾಚರಣೆ" ಆಚರಿಸಲು ಉಲ್ಲೇಖದ ಪತ್ರದಲ್ಲಿ ಭಾರತ ಸರ್ಕಾರದ ಕಾರ್ಯದರ್ಶಿಗಳು ಮಾನವ ಸಂಪನ್ಮೂಲ ಇಲಾಖೆ, ಇವರಿಂದ ರಾಜ್ಯದ ಎಲ್ಲಾ ಶಾಲೆಗಳು ಕಡ್ಡಾಯವಾಗಿ ಆಚರಿಸಲು ತಿಳಿಸಿರುತ್ತಾರೆ.

ಆದ್ದರಿಂದ ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕಡ್ಡಾಯವಾಗಿ ಆಚರಿಸಲು ಕ್ರಮತೆಗೆದುಕೊಳ್ಳಲು ಈ ಮೂಲಕ ತಿಳಿಸಿದೆ. ರಾಷ್ಟ್ರೀಯ ಏಕತಾ ದಿನದಲ್ಲಿ ತೆಗೆದುಕೊಳ್ಳಬೇಕಾದ ಪ್ರತಿಜ್ಞಾ ವಿಧಿಯ ಪತ್ರವನ್ನು ಹಾಗೂ ಉಲ್ಲೇಖಿತ ಪತ್ರದ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ. ಏಕತಾ ದಿನದ ಧ್ಯೇಯ ಏನೆಂದರೆ, "ಏಕತೆ, ಸಮಗ್ರತೆ, ಸುರಕ್ಷತೆ ಮತ್ತು ಭದ್ರತೆ" ಈ ನಿಟ್ಟಿನಲ್ಲಿ ಶಾಲಾಮಟ್ಟದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು "ರಾಷ್ಟ್ರೀಯ ಏಕತಾ ದಿನ" ಆಚರಿಸಲು ತಿಳಿಸಿದೆ. ಹಾಗೂ ಈ ಸಂದರ್ಭದಲ್ಲಿ ಈ ಪತ್ರಕ್ಕೆ ಲಗತ್ತಿಸಿರುವ ಪ್ರತಿಜ್ಞಾ ವಿಧಿಯನ್ನು ಬೋಧಿಸುವುದು.

[ಮೊಹಮ್ಮದ್ ಮೊಹಸಿನ್]
ಆಯುಕ್ತರು.
25/10/14

**ಇವರಿಗೆ:**

01. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು [ಆಡಳಿತ], ಸಾರ್ವಜನಿಕ ಶಿಕ್ಷಣ ಇಲಾಖೆ.
02. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ. ಇವರಿಗೆ ಸಂಬಂಧಿಸಿದ ಉಪನಿರ್ದೇಶಕರ ಮೂಲಕ.

**ಪ್ರತಿಯನ್ನು:**

03. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಹಾಗೂ ಗುಲ್ಬರ್ಗಾ ಇವರಿಗೆ ಕಳುಹಿಸುತ್ತಾ, ಈ ಬಗ್ಗೆ ಸೂಕ್ತ ಕ್ರಮವಹಿಸಲು ತಿಳಿಸಿದೆ.
04. ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು, ಇವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಕಳುಹಿಸಿದೆ.
05. ಕಛೇರಿ ಪ್ರತಿ.

ಪೂರ್ಣಿಮ. \\Typing3server\E\D\Adm2\520-2014.doc

ಅತೀ ಮುಖ್ಯವಾದದ್ದು.

## ರಾಷ್ಟ್ರೀಯ ಏಕತಾ ದಿನ – ಪ್ರತಿಜ್ಞಾ ವಿಧಿ

ನಾನು ಸತ್ಯ ನಿಷ್ಠೆಯಿಂದ ಪ್ರಮಾಣೀಕರಿಸುವುದೇನೆಂದರೆ, ನಾನು ದೇಶದ ಏಕತೆ, ಸಮಗ್ರತೆ ಮತ್ತು ಸುರಕ್ಷತೆಯನ್ನು ಕಾಪಾಡಲು ಹಾಗೂ ಈ ಸಂದೇಶವನ್ನು ನನ್ನ ದೇಶವಾಸಿಗಳಲ್ಲಿ ಹರಡಲು ಶ್ರದ್ಧಾಪೂರ್ವಕವಾಗಿ ಪ್ರಯತ್ನಿಸುತ್ತೇನೆ. ನಾನು ಈ ಪ್ರತಿಜ್ಞೆಯನ್ನು ದಿವಂಗತ ಸರ್ದಾರ್ ವಲ್ಲಭಭಾಯಿ ಪಟೇಲ್ ಇವರು ದೇಶದ ಏಕತೆಗಾಗಿ ಅವರು ಹೊಂದಿದ್ದ ದೂರದೃಷ್ಠಿ ಹಾಗೂ ಕೈಗೊಂಡ ದಿಟ್ಟ ಕ್ರಮಗಳನ್ನು ಸ್ಮರಿಸುತ್ತಾ ಸ್ವೀಕರಿಸುತ್ತೇನೆ. ಇದರ ಜೊತೆಗೆ ನಾನೂ ಸಹ ದೇಶದ ಆಂತರಿಕ ಭದ್ರತೆಯನ್ನು ಕಾಪಾಡಲು ಮನಃಪೂರ್ವಕವಾಗಿ ಹಾಗೂ ಸತ್ಯನಿಷ್ಠೆಯಿಂದ ಸಂಕಲ್ಪ ಮಾಡುತ್ತೇನೆ.

| | | |
|---|---|---|
| | | |